ಸಭೆಯಲ್ಲಿ ಮಂಡಿಸಲಾದ ಕಾಗದ ಪತ್ರಗಳು

ಶ್ರೀ ಎಂ. ರಘುಪತಿ (ವಿಮಾನಯಾನ), ಬಂದರು ಹಾಗೂ ಸಣ್ಣ ಕೈಗಾರಿಕೆಗಳ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ೧೯೫೬ನೇ ಇಸವಿಯ ಕಂಪನಿಗಳ ಕಾಯಿದೆಯ ೬೧೯ (ಎ)ನೇ ಕಲಮಿನ ಮೇರೆಗೆ ಕರ್ನಾಟಕ ವಿಮಾನಯಾನ ಅಭಿವೃದ್ಧಿ ನಿಗಮದ ವಿಮಾನಯಾನ ೧೯೮೭-೮೮ನೇ ಸಾಲಿನ ಪ್ರಗತಿಯ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಮಂಡಿಸಲಾಯಿತು.

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಅಧ್ಯಕ್ಷರೇ, ಶ್ರೀ ಕೆ. ಬಿ. ಕೋಳಿವಾಡ್ ಅವರ ಪರವಾಗಿ ಅವರ ಹೆಸರಿನ ಮುಂದಿರುವ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅ) ರಾಣೇಬೆನ್ನೂರು ತಾಲ್ಲೂಕಿನ ಮುದೇನೂರು ಗ್ರಾಮದ ಕುಡಿಯುವ ನೀರಿನ ಟ್ಯಾಂಕ್‌ನ್ನು ಓವರ್ ಟ್ಯಾಂಕ್ ಆಗಿ ಪರಿವರ್ತಿಸಲು ಮಂಜೂರಾತಿ ನೀಡುವ ಬಗ್ಗೆ ಮುದೇನೂರು ಗ್ರಾಮಸ್ಥರ ಅರ್ಜಿ ಹಾಗೂ

ಆ) ರಾಣೇಬೆನ್ನೂರಿನಿಂದ ಮುದೇನೂರು ಗ್ರಾಮಕ್ಕೆ ರಸ್ತೆಯು ಡಿಪೇರಿ ಬಗ್ಗೆ ಮುದೇನೂರು ಗ್ರಾಮಸ್ಥರ ಅರ್ಜಿಯನ್ನು ಸಭೆಗೆ ಒಪ್ಪಿಸುವುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಅಧ್ಯಕ್ಷರೇ, ನನ್ನ ಹೆಸರಿನ ಮುಂದಿರುವ ಭೂ ನೀರಾವರಿಗಾಗಿ ನೀರೆತ್ತಲು ಅನುಮತಿಗಾಗಿ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕು ಉಗಾರ್ ಬುದ್ರುಕ್ ನಲ್ಲಿರುವ ಉಗಾರ್‌ಬುದ್ರುಕ್ ಸೇಡಬಾಳ ಸಂಯುಕ್ತ ನೀರಾವರಿ ಯೋಜನೆಯ ಪ್ರಮೋಟರ್‌ರವರ ಅರ್ಜಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಅರ್ಜಿಗಳನ್ನು ಒಪ್ಪಿಸಲಾಯಿತು. ಇನ್ನು ಗಮನ ಸೆಳೆಯುವ ಸೂಚನೆಗಳು.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ಎಂ.ಡಿ. ಮೆಡಿಕಲ್ ಸೀಟ್ ಸ್ಕ್ಯಾಂಡಲ್ ಬಗ್ಗೆ ನೇಮಿಸಿದ ವಿಚಾರಣಾ ಆಯೋಗದ ಅಧ್ಯಕ್ಷರ ರಾಜೀನಾಮೆಯು ಕುರಿತು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಗಮನ ಸೆಳೆಯುವ ಸೂಚನೆಗೆ ಮುಂಚೆ ಎಂ.ಡಿ. ಸೀಟ್ ಹಗರಣದ ಬಗ್ಗೆ ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದೇವೆ. ಶ್ರೀಮಾನ್ ಪುಟ್ಟಸ್ವಾಮಿಯವರಿ ರೆಸಿಗ್ನೇಷನ್ ಕೊಟ್ಟ ಮೇಲೆ ಶ್ರೀಮಾನ್ ನಾರಾಯಣಕಾಮಾರ್ ಅವರನ್ನು ನೇಮಕಾತಿ ಮಾಡಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದಕ್ಕೆ ಉತ್ತರ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಿನ್ನೆಯ ಉತ್ತರದಲ್ಲಿ ಇದನ್ನು ಹೇಳಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಇದನ್ನೇ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇಲ್ಲ. ಎರಡೂವರೆ ಲಕ್ಷ ರೂಪಾಯಿಗಳನ್ನು ಯಾರ್ಯಾರು ತೆಗೆದುಕೊಂಡಿದ್ದಾರೆ.....

SRI A. LAKSHMISAGAR.—It does not become a matter for an adjournment motion.

ಅಧ್ಯಕ್ಷರು.—ಇಲ್ಲಿ ಸ್ವಲ್ಪ ಕೇಳಿ. ನಿನ್ನೆ ಉತ್ತರವನ್ನು ಕ್ಲಿಯರ್ ಆಗಿ ಹೇಳಿದ್ದಾರೆ. ಅದನ್ನು ಆಗುವುದಿಲ್ಲವೆಂದು ನಾನು ರಿಜಕ್ಟ್ ಕೂಡ ಮಾಡಿದ್ದೇನೆ. ನೀವು ಬೇಕಾದರೆ ಕಾಲಿಂಗ್ ಅಟೆಷನ್ ನೋಟೀಸ್ ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ರೀಕನ್ಸಿಡರ್ ಮಾಡಿ ಎಂದು ಕೇಳಿದ್ದೇವೆ. I have also given a letter.

ಅಧ್ಯಕ್ಷರು.—ತಾವು ಸೀನಿಯರ್ ಮೋಸ್ಟ್ ಎಕ್ಸ್ ಮಿನಿಸ್ಟರ್ ಇದ್ದೀರಿ. ತಮಗೆ ರೂಲ್ಸ್ ರೆಗ್ಯುಲೇಷನ್ಸ್ ಗೊತ್ತಿದೆ. ನಿನ್ನೆ ಉತ್ತರ ಕೊಟ್ಟಿದ್ದಾರೆ. ಮತ್ತು ನಾನೂ ಅನುಮತಿಯನ್ನು ನಿರಾಕರಣೆ ಮಾಡಿದ್ದೇನೆಯೆಂದು ನಿಮಗೆ ತಿಳಿಸಿಯೂ ಬಿಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಾವು ತಿಳಿಸಿದ ಮೇಲೆ ನಮಗೆ ಇರತಕ್ಕ ಅಧಿಕಾರದಂತೆ ರೀಕನ್ಸಿಡರ್ ಮಾಡಿ ಎಂದು ಕೇಳಿದ್ದೇವೆ. ಅದನ್ನು ಬರೆದೂ ಕೊಟ್ಟಿದ್ದೇವೆ. ಈ ದೃಷ್ಟಿಯಿಂದ ತಮಗೆ ಕೇಳಿಕೊಳ್ಳತಕ್ಕದ್ದು ಇಷ್ಟೆ. ಇದು ಒಂದು ದೊಡ್ಡ ಹಗರಣ ಇದೆ. ಸಾರ್ವಜನಿಕರ ತಿಳುವಳಿಕೆಗೋಸ್ಕರ ಪಂತ್ರು ಎಂ.ಡಿ. ಸೀಟ್‌ನಲ್ಲಿ ಏನು ಭರತ್ ಹೆಗಡೆಯವರು ಇನ್ವಾಲ್ವ್ ಆಗಿದ್ದಾರೆ, ಇದರ ಬಗ್ಗೆ ತೀರ್ಮಾನವಾಗಬೇಕಾಗಿದೆ. ಈ ರೀತಿಯಾದಂಥ ಹಗರಣಗಳು ಒಂದರ ಮೇಲೆ ಒಂದು ನಡೆದರೆ ಮತ್ತು ಮುಖ್ಯಮಂತ್ರಿಗಳ ಹೆಸರನ್ನು ದುರುಪಯೋಗ ಮಾಡಿಕೊಂಡು ಪ್ರತಿಯೊಬ್ಬರೂ ಅಂದರೆ ಅವರ ಸಂಬಂಧಿಕರೂ ಈ ರೀತಿಯಾಗಿ ವರ್ತನೆ ಮಾಡಿದರೆ ಸರಿಯಲ್ಲ ಎನ್ನತಕ್ಕ ದೃಷ್ಟಿಯಿಂದ...

SRI A. LAKSHMISAGAR.—He is repeating ad nausium.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಆ ಪಾಯಿಂಟ್‌ಗೇ ನಾನು ಹೋಗುವುದಿಲ್ಲ. ಅಧ್ಯಕ್ಷರೇ ಇವತ್ತು.....

ಅಧ್ಯಕ್ಷರು.—ಆಯಿತು. ನೀವು ರೀಕನ್ಸಿಡರ್ ಮಾಡಿ ಎಂದು ಲೆಟರ್ ಕೊಟ್ಟಿದ್ದೀರಿ. ಅವರು ಏನೂ ಹೇಳುತ್ತಾರೋ ನೋಡೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ತಾನೆ ಇದೇ ಪ್ರಶ್ನೆಯನ್ನು ಇಲ್ಲಿ ಪ್ರಸ್ತಾಪ ಮಾಡಿದಾಗ ಉತ್ತರವನ್ನು ಕೊಟ್ಟಿದ್ದಾರೆ. ಇದಕ್ಕಿಂತಲೂ ಹೆಚ್ಚಿನ ಉತ್ತರವನ್ನು ಈಗ ಕೊಡತಕ್ಕಂಥ ಅಗತ್ಯ ಇಲ್ಲ. ಜ್ಯುಡಿಶಿಯಲ್ ಎನ್‌ಕ್ವೈರಿ ಮುಂದೆ ಇದು ಇದೆ. ಅಲ್ಲಿ ಪರಿಪೂರ್ಣವಾಗಿ ಚರ್ಚೆ ಮಾಡುವುದಕ್ಕೆ, ಅದರ ಮೇಲೆ ಎನ್‌ಕ್ವೈರಿ ಮಾಡುವುದಕ್ಕೆ ಅವಕಾಶ ಇದೆ. ಸನ್ಮಾನ್ಯ ಖಾರ್ಗೆಯವರಿಗೆ ಇದರಲ್ಲಿ ಏನಾದರೂ ಮಾಹಿತಿ ಇದ್ದರೆ ಕಮೀಷನ್ ಮುಂದೆ ಹೋಗಿ ಕೊಡತಕ್ಕಂಥ, ವಾದ ಮಾಡತಕ್ಕಂಥ ಶಕ್ತಿ ಅಧಿಕಾರ ಅವರಿಗೆ ಇದೆ. ಇಲ್ಲಿ ನಿಲುವಳಿ ಸೂಚನೆಯ ಮುಖಾಂತರವಾಗಲೀ, ಬೇರೆ ರೂಪದಲ್ಲಾಗಲೀ ಜ್ಯೂಡಿಷಿಯಲ್ ಎನ್‌ಕ್ವೈರಿ ಮುಂದೆ ಇರತಕ್ಕಂಥ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲ. ತಾವು ಇದಕ್ಕೆ ಅವಕಾಶ ಮಾಡಿಕೊಡಬಾರದೆಂದು. ರಾಜಕೀಯೆಂ ದುರುದ್ದೇಶಕ್ಕೋಸ್ಕರ ಹೇಳಿದ್ದನ್ನೇ ಹೇಳುತ್ತಾ ಇರುತ್ತಾರೆ. ಆದ್ದರಿಂದ ಇದಕ್ಕೆ ಅವಕಾಶ ಮಾಡಿಕೊಡಬಾರದು. ಈ ಮನೆಯ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಯಾರಿಗೂ ತಾವು ಅವಕಾಶ ಮಾಡಿ ಕೊಡಬಾರದು ಎಂದು ನಾನು ತಪ್ಪಿಲ್ಲಿ ವಿನಂತಿಸಿಕೊಳ್ಳುತ್ತೇನೆ.

SRI D. A. CHINNAPPA.—Sir, I am on a point of order.

ಅಧ್ಯಕ್ಷರು.—ಶ್ರೀ ಖಾರ್ಗೆಯವರೇ, ನಾನು ಅನುಮತಿಯನ್ನು ನಿರಾಕರಣೆ ಮಾಡಿದ್ದೇನೆ ಎಂದು ತಿಳಿಸಿಬಿಟ್ಟಿದ್ದೇನೆ. ತಾವು ರೀಕನ್ಸಿಡರ್ ಅಪ್ಲಿಕೇಷನ್ ಕೊಟ್ಟಿದ್ದೀರಿ. ಈಗ ಆ ಪ್ರಶ್ನೆ ಬರುವುದಿಲ್ಲ. I will look into it in my chamber. ನೀವು ಕೊಟ್ಟ ಅರ್ಜಿಯನ್ನು ನಾನು ನೋಡುತ್ತೇನೆ. ನೀವು ಬೇಕಾದರೆ ಬಂದು ನನಗೆ ಕನ್ವಿನ್ಸ್ ಮಾಡಿ. ಆದರೆ ಈಗ ಕನ್ಸಿಡರ್ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇಲ್ಲಿ ಎರಡೂ ವಿಷಯ ಬೇರೆ ಬೇರೆ ಇದೆ. ನಾವು ಕೇಳಿದ್ದು ಏನು ? ಈಗ ನಾರಾಯಣಕುಮಾರ್ ಅವರನ್ನು ಹೊಸದಾಗಿ ಅಪಾಯಿಂಟ್ ಮಾಡಿ.....

ಅಧ್ಯಕ್ಷರು.—ಇದು ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ಬರುವುದಿಲ್ಲ, ಇಲ್ಲ, ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರ ಮಗ ಹೆಗಡೆಯವರ ಫರ್ಮ್‌ನಲ್ಲಿ ವಕಾಲತ್ತು ಮಾಡುತ್ತಿದ್ದಾರೆ, ದಯವಿಟ್ಟು ನೀವು ನನಗೆ ಅವಕಾಶ ಮಾಡಿಕೊಡಬೇಕು.

(ಮುಂದಲು)

SRI A. LAKSHMISAGAR.—Sir, it must go off the record. ಯಾರ್ಯಾರ ಹೆಸರುಗಳನ್ನು ಹೇಳಿದ್ದಾರೆ, ಅವರು ಈ ಸಭೆಯ ಸದಸ್ಯರಲ್ಲ.....

ಅಧ್ಯಕ್ಷರು.—ಸ್ವಲ್ಪ ತಡೆಯಿರಿ. Don't mentin those names.

ಶ್ರೀ ಎ. ಲಕ್ಷ್ಮೀಸಾಗರ್.—ಅದರ ಬಗ್ಗೆ ಜಂಡಿಷಿಯಲ್ ಎನ್‌ಕ್ವೈರಿ ಇದೆ. ಅದನ್ನು ಕಡತದಿಂದ ತೆಗೆದುಹಾಕಬೇಕು.

ಅಧ್ಯಕ್ಷರು.—ನಾನು ನಿಯಮವನ್ನು ಓದಿ ಹೇಳುತ್ತೇನೆ.

"When the Speaker withholds his consent to the moving of an adjournment motion in his Chamber it is neither obligatory to read out the motion to the House nor to give the reasons for refusing the consent. After a member is informed of the Speaker's decision withholding his consent no question is permitted to be raised in the House either on the subject-matter of the notice or the reasons for disallowance thereof. If, however, a member would like to make a submission to the Speaker to reconsider his decision, he can do so either in person to the Speaker in his Chamber later during the day or by submitting a written representation to the Speaker in that behalf. In case the Speaker is satisfied on the submission of the member that there are adequate grounds to bring up the matter before the House, he would either mention it or permit the member to raise it on the following day, irrespective of the fact that the notice had been given on the previous day."

This is my ruling. The matter is now closed.

SRI M. RAGHUPATHY.—Your ruling is very clear.

SRI M. MALLIKARJUNA KHARGE.—I have given in writing to reconsider the issue.

(Interruption)

MR. SPEAKER.—I am very sorry. I have to order not to record. You are a senior member. Ex-Minister, Deputy Leader of the Opposition. You must convience me in my Chamber.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ತಮ್ಮ ಚೇಂಬರಿನಲ್ಲಿ ಬಂದು, ಈ ವಿಷಯದ ಬಗ್ಗೆ ಚರ್ಚೆ ಮಾಡಲಿ...

(ಗೊಂದಲ)

MR. SPEAKER.—You may convience me in my chamber. ನೀವು ಈ ತರಹ ಆರ್ಗ್ಯುಮೆಂಟ್ ಮಾಡಿದರೆ ಹೇಗೆ? ನೀವು ಲೆಟರ್ ಕೊಟ್ಟಿದ್ದೀರಿ. ನೀವು ನನ್ನ ಚೇಂಬರಿಗೆ ಬಂದು ಮಾತನಾಡಿ...

SRI M. MALLIKARJUNA KHARGE.—According to your own ruling, I can submit here.

ಅಧ್ಯಕ್ಷರು.—ಇಲ್ಲಿ ಆಗುವುದಿಲ್ಲ.

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೇ, ನಿನ್ನೆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯದ ಬಗ್ಗೆ ಸಂಪೂರ್ಣವಾದ ಉತ್ತರ ಕೊಟ್ಟಿದ್ದಾರೆ. ಮತ್ತೆ ಅದೇ ವಿಷಯವನ್ನು ಪ್ರಸ್ತಾಪ ಮಾಡುವುದು ಸರಿಯಾಗಿ ಕಾಣುವುದಿಲ್ಲ...

ಶ್ರೀ ಎ. ಲಕ್ಷ್ಮೀಸಾಗರ್.—ರಾಜಕೀಯ ದುರುದ್ದೇಶದಿಂದ ಇದನ್ನು ಮಾಡುತ್ತಿದ್ದಾರೆ...

(ಗೊಂದಲ)

ಶ್ರೀ ಎಸ್. ಜಿ. ನಂಜಯ್ಯನಮಠ್.—ಸಂಬಂಧಿಕರನ್ನು ಆಯೋಗಕ್ಕೆ ನೇಮಿಸಿದರೆ ಸರಿಯಾದ ತನಿಖೆ ಆಗುತ್ತದೆಯೇ?.....

ಅಧ್ಯಕ್ಷರು.—ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. I will look into it in my chamber.

ಶ್ರೀ ಬಿ. ರಾಚಯ್ಯ.—ತಾವು ಇದಕ್ಕೆ ಅವಕಾಶ ಕೊಡಬಾರದು. ಪದೇ ಪದೇ ಅವಕಾಶ ಕೊಡುತ್ತಾ ಹೋದರೆ, ಇದು ಸರಿಯಾಗುವುದಿಲ್ಲ.

ಅಧ್ಯಕ್ಷರು.—ನೀವು ಲೆಟರ್ ಕೊಟ್ಟಿದ್ದೀರಿ. ನಿಮ್ಮ ಲೆಟರ್ ಬಗ್ಗೆ ನಾಳೆ ಹೇಳಬೇಕಾಗುತ್ತದೆ, ಈಗ ಹೇಳುವುದಕ್ಕೆ ಆಗುವುದಿಲ್ಲ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ...

ಅಧ್ಯಕ್ಷರು.—ದಯಮಾಡಿ ಆಗುವುದಿಲ್ಲ. ಈಗ ಆಗುವುದಿಲ್ಲ. ಈಗ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ಇದು ಮುಗಿದ ಮೇಲೆ ನನ್ನ ಚೇಂಬರಿಗೆ ಬಂದು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಮ್ಮ ಮಾತಿಗೆ ಬೆಲೆ ಕೊಡುತ್ತೇನೆ. ಒಂದು ಮಾತನ್ನು ಕೇಳಿ. ವಿಷಯ ಇಷ್ಟೆ...

ಅಧ್ಯಕ್ಷರು.—ಇಲ್ಲಿ ಆಗುವುದಿಲ್ಲ. ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಮಾಡಿದ್ದು ಸರಿಯೇ, ಇಲ್ಲವೇ ಎಂಬುದು ಇಲ್ಲಿ ಚರ್ಚೆಯಾಗಿರುವುದಿಲ್ಲ....

(Interruption)

MR. SPEAKER.—Nothing will be recorded. I have already given the ruling. ಈಗ ಆಗುವುದಿಲ್ಲ. ಈಗ ಗಮನ ಸೆಳೆಯಂಥ ಸೂಚನೆಗಳು ಇವೆ, ಈ ವಿಷಯಗಳನ್ನು ತೆಗೆದುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ರೂಲ್ ಔಟ್ ಮೇಲಾದರೂ ಪರ್ಮಿಟ್ ಮಾಡಿ. ಇದೇ ಆಗಬೇಕೆಂದೇನೂ ಇಲ್ಲ.

ಅಧ್ಯಕ್ಷರು.—ರೂಲ್ ಔಟ್ ಮೇಲೆ ಪರ್ಮಿಟ್ ಮಾಡುವುದಾಯಿತು. ಕಾಲಿಂಗ ಅಟೆನ್‌ಷನ್ ಮಾಡುವುದಾಯಿತು, ಈ ಸಭೆ ಮುಗಿದ ಮೇಲೆ ನನ್ನ ಚೇಂಬರ್‌ಗೆ ಬನ್ನಿ. ನಾವೂ ನೀವೂ ಕುಳಿತು ಮಾತನಾಡೋಣ. ಅಸೆಂಬ್ಲಿ ಮುಗಿದ ಕೂಡಲೇ, ಕೆ ಹೆಚ್. ಪಾಟೀಲರು, ನೀವು, ಮೊಯಿಲಿ ಯವರು, ಲಾ-ಮಿನಿಸ್ಟರ್‌ರವರು ಎಲ್ಲರೂ ಬನ್ನಿ. ರೂಲ್ ಔಟ್ ಮಾಡಬೇಕೋ, ಕಾಲಿಂಗ್ ಅಟೆನ್‌ಷನ್ ಮಾಡಬೇಕೋ ವಿಚಾರ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೊನ್ನೆ ರಶೀದ್ ಕೇಸ್‌ನಲ್ಲಿ ರೂಲ್ ಔಟ್‌ನಲ್ಲಿ ತೆಗೆದು ಕೊಳ್ಳುತ್ತೇನೆ ಎಂದು ಇಲ್ಲೇ ಹೇಳಿದಿರಿ. ಇದನ್ನೂ ಇಲ್ಲೇ ಹೇಳಿಬಿಡಿ.

ಅಧ್ಯಕ್ಷರು.—ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ನನ್ನ ಚೇಂಬರ್‌ನಲ್ಲಿ ಹೇಳಬೇಕಾಗುತ್ತದೆ, ಮಾನ್ಯ ಖರ್ಗೆಯವರೇ ಇಲ್ಲಿ ಕೇಳಿ,

> "When the Speaker withholds his consent to the moving of an adjournment motion in his chamber it is neither obligatory to read out the motion to the House nor to give

the reasons for refusing the consent. After a member is informed of the Speaker's decision withholding consent, no question is permitted to be raised in the House either on the subject matter of the notice or the reasons for disallowance thereof. If, however, a member would like to make a submission to the Speaker to consider his decision he can do so either in person to the Speaker..."

SRI M. MALLI ARJUNA KHARGE.—I have given sufficient reasons. Why the Government is afraid of discussing this issue?

MR. SPEAKER.—I will reconsider, you come to my chamber. Whether to take up under rule 68 or other rule. I will consider. ಅದಕ್ಕೆ ನಾನೂ ಏನೂ ಹೇಳುತ್ತೇನೆ ಎಂದರೆ, ನೀವು ನನ್ನ ಚೇಂಬರ್‌ಗೆ ಬನ್ನಿ.

ಇಲ್ಲಿ ರಿಕನ್ಸಿಡರ್ ಮಾಡುವುದಿಲ್ಲ, ಇಲ್ಲಿ ರಿಕನ್ಸಿಡರ್ ಮಾಡುವುದಕ್ಕೆ ಆಗುವುದಿಲ್ಲ. ರಿಕನ್ಸಿಡರ್ ಮಾಡುವುದೂ ಇತ್ತು ಎಂದರೆ, ರೂಲ್ ೬೮ ನಲ್ಲಿ ಅಥವಾ ಕಾಲಿಂಗ್ ಅಟೆನ್‌ಷನ್ ರೂಪದಲ್ಲಿ ಅಥವಾ ಮತ್ತೊಂದು ರೂಪದಲ್ಲಿ ಇದನ್ನು ತೆಗೆದುಕೊಳ್ಳಬೇಕು ಎಂದರೆ ನನ್ನ ಚೇಂಬರ್‌ಗೆ ಬಂದು ಕನ್‌ವಿನ್ಸ್ ಮಾಡಿರಿ. ನೀವು ಬನ್ನಿ, ಮಾನ್ಯ ಕೆ. ಹೆಚ್. ಪಾಟೀಲರೂ, ಬರಲಿ, ಮಾನ್ಯ ಮೊಯಿಲಿಯವರೂ ಬರಲಿ, ಲಾ ಮಿನಿಸ್ಟರ್ ಮತ್ತು ಹೆಲ್ತ್ ಮಿನಿಸ್ಟರ್‌ರವರು ಬರಲಿ, ೫ ಜನ ಕುಳಿತುಕೊಂಡು ಏನು ಮಾಡಬೇಕೆಂದು ವಿಚಾರ ಮಾಡೋಣ.

(ಗೊಂದಲ)

You please convince me in my chamber, not here.

SRI MALLIKARJUNA M. KHARGE.—Why the Government is shielding this issue ?

SRI LAKSHMISAGAR.—It is unfortunate that the Deputy Leader of the Opposition is making unfounded allegations.....

(Interruption)

ಶ್ರೀ ಎ. ಲಕ್ಷ್ಮೀಸಾಗರ್.—ತಪ್ಪು ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ—ನೀವೂ ದುರುಪಯೋಗ ಮಾಡಿಕೊಳ್ಳುತ್ತಿದ್ದೀರಿ. You are misusing to all extent, whatever possible.

ಅಧ್ಯಕ್ಷರು.—ಈಗ ಯಾರು ಏನು ಹೇಳಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ನಾನು ರೂಲಿಂಗ್ ಕೊಟ್ಟಿದ್ದೇನೆ. ಈಗ ಏನು ಮಾಡಿದರೂ ಸಾಧ್ಯವಿಲ್ಲ. ಏನಾದರೂ ಕನ್‌ವಿನ್ಸ್ ಮಾಡುವುದು ಇತ್ತು ಎಂದರೆ ನನ್ನ ಚೇಂಬರ್‌ಗೆ ಬನ್ನಿ, ಕನ್‌ವಿನ್ಸ್ ಮಾಡಿರಿ. ರೂಲ್ ೬೮ ನಲ್ಲಾಗಲೀ, ಕಾಲಿಂಗ್ ಅಟೆನ್‌ಷನ್‌ನಲ್ಲಾಗಲೀ ತೆಗೆದುಕೊಳ್ಳಬೇಕಾದರೆ ಬಂದು ಕನ್‌ವಿನ್ಸ್ ಮಾಡಿ. ನಿಮಗಿಂತ ಸೀನಿಯರ್ ಮೋಸ್ಟ್ ಮೆಂಬರ್ಸ್ ಇದ್ದಾರೆ, ಅವರು ಹೇಳುವುದನ್ನು ಕೇಳಿರಿ. You can come to my Chamber.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೆ, ಎಷ್ಟು ಧಾರಾಳವಾಗಿ ಇದ್ದಿರಿ, ಈಗ ವಿತಕ್ಕೆ ಈ ರೀತಿ ಮಾಡುತ್ತಿದ್ದೀರಿ ?

ಅಧ್ಯಕ್ಷರು.—ನಾನು ನಿಮಗೂ ಧಾರಾಳವಾಗಿ ಇದ್ದೇನೆ, ಇವರಿಗೂ ಧಾರಾಳವಾಗಿ ಇದ್ದೇನೆ, ನನ್ನ ಧಾರಾಳತನವನ್ನು ದುರುಪಯೋಗ ಮಾಡಿಕೊಳ್ಳುವುದು ಬೇಡ.

(ಗೊಂದಲ)

SRI MALLIKARJUNA M. KHARGE.—You are misusing.....

ಅಧ್ಯಕ್ಷರು.—ಈಗ ಯಾರು ಏನು ಮಾ ನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದರ ಬಗ್ಗೆ ತಾವು ಹೇಳಬೇಕು. ಇವರೇನು ಇದರ ಬಗ್ಗೆ ಜಡ್ಜ್‌ಮೆಂಟ್, ತೀರ್ಪು ಹೊಳುವುದು ? He has not right to say that.

(ಗೊಂದಲ)

ಅಧ್ಯಕ್ಷರು.—ಆಯಿತು, ಈ ವಿಚಾರ ಇಲ್ಲಿಗೆ ಕ್ಲೋಸ್ ಮಾಡಿರುತ್ತೇನೆ, ಸಭೆ ವುಂಗಿದ ಕೂಡಲೇ ನನ್ನ ಚೇಂಬರ್‌ಗೆ ಬನ್ನಿ Let us see what we should do about it.

ಶ್ರೀ ಎ. ಲಕ್ಷ್ಮೀಸಾಗರ್.—ಇದನ್ನು ಜ್ಯುಡಿಷಿಯಲ್ ಎನ್‌ಕ್ವೈರಿಗೆ ರೆಫರ್ ಮಾಡಿ ಆಗಿದೆ. ಅದು ಅರ್ಧ ನಡೆದಿದೆ ಅಲ್ಲಿ ಎಲ್ಲಾ ವಿಚಾರವನ್ನೂ ಪ್ರಸ್ತಾಪ ಮಾಡುವುದಕ್ಕೆ ಬರುತ್ತದೆ. ಅಲ್ಲಿ ಅವಕಾಶ ಇದೆ. ಆದರೆ ಇದನ್ನು ಹೌಸ್‌ನಲ್ಲಿ ಡಿಸ್ಕಸ್ ಮಾಡುವುದಕ್ಕೆ ಬರುವುದಿಲ್ಲ, ಹೌಸ್‌ನಲ್ಲಿ ಇದನ್ನು ಡಿಸ್ಕಸ್ ಮಾಡುವ ಪ್ರೊಪೆಪ್ಯಟಿ ಏನು ? ಅವಶ್ಯಕತೆ ಏನು ನೀವೇ ಹೇಳಿ, ಇದು ರಾಜಕೀಯ ದುರುದ್ದೇಶ ಹೌದೋ ಅಲ್ಲವೋ ?

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—***ಇವರಿಗೆ ಚೀಫ್ ಮಿನಿಸ್ಟರ್. ರಾಮಕೃಷ್ಣ ಹೆಗಡೆ ಇವರೆಡು ಬಿಟ್ಟರೆ ಬೇರೆ ಏನೂ ಸರಕೇ ಇಲ್ಲ. ಇವರ ಹತ್ತಿರ.

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ಹೇಳುವುದಕ್ಕೆ ನಾವು ಒಪ್ಪುತ್ತೇವೆ. ಉಪನಾಯಕರಿಗೂ ಕೂಡಾ ತಾವು ಹೇಳಿದ್ದಕ್ಕೆ ವಿರುದ್ಧವಾಗಿ ಮಾತನಾಡಬೇಕೆಂಬ ಉದ್ದೇಶ ಏನೂ ಇಲ್ಲ.

ಶ್ರೀ ಎಂ. ರಘುಪತಿ.—ಜುಡಿಷಿಯಲ್ ಎನ್‌ಕ್ವೈರಿಯಲ್ಲಿರುವ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ ವಿಚಾರ ಈ ಸದನದ ಇತಿಹಾಸದಲ್ಲೇ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಸದನದ ಇತಿಹಾಸದ ಸ್ಪಷ್ಟ ಚಿತ್ರ ತಮಗೆ ಇಲ್ಲ. ಇಲ್ಲಿ ಉಪದೇಶ ಮಾಡತಕ್ಕಂಥ ವ್ಯವಹಾರ ಬೇಡ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಇವರು ರಾಜಕೀಯ ದುರುದ್ದೇಶವನ್ನು ಇಟ್ಟುಕೊಂಡು ಜುಡಿಷಿಯರಿ ಮೇಲೆ ಇಲ್ಲಿ ಚರ್ಚೆ ಮಾಡಬೇಕೆಂದು ಹೇಳುವುದು ನ್ಯಾಯವೇ ? ಇದರ ಪ್ರೊಪೆಪ್ಯಟಿ ಏನಿದೆ ದಯವಾಡಿ ಹೇಳಿ ತಾವು.....

(ಗೊಂದಲ)

MR. SPEAKER.—Both of you please don't go to the root.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ ಸಚಿವರು ಹೇಳಿದ್ದೆಲ್ಲಾ ರೆಕಾರ್ಡ್‌ಗೆ ಹೋಗಿದೆ. ಅದನ್ನು ತೆಗೆಸಿ.

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಹೇಳಿದ್ದೆಲ್ಲಾ ರೆಕಾರ್ಡ್‌ಗೆ ಹೋಗಿದೆ. ಅದನ್ನು ತೆಗೆಸಿ.

ಅಧ್ಯಕ್ಷರು.—ಎಷ್ಟು ಕಡೆಯವರು ಏನು ಆನ್‌ಪಾರ್ಲಿಮೆಂಟರಿ ಮಾತನಾಡಿದ್ದಾರೋ ಅದನ್ನು ನಾನು ಎಕ್ಸ್‌ಪಂಜ್ ಮಾಡಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಆಯಿತು. ತೆಗೆಯಿರಿ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ ತಾವು ಮಾನ್ಯ ಮಂತ್ರಿಗಳ ಗಮನ ಸೆಳೆಯಿರಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೇ, ಕೊನೆಗೆ ಏನಾಯಿತು ? ನಮ್ಮನ್ನು ತಮ್ಮ ಛೇಂಬರ್‌ಗೆ ಕರೆದು ಚರ್ಚೆ ಮಾಡುತ್ತೀರಾ ?

---

*Expunged as ordered by the Chair

ಅಧ್ಯಕ್ಷರೆ.—ಆಯಿತು. ಆಮೇಲೆ ಹಾಡಿದ್ದೇ ಹಾಡೋ ಕಿಸಬಾಯಿದಾಸ ಎಂದು ಹೇಳಿದ ಪದವನ್ನು ನಾನು ಎಕ್ಸ್‌ಪಂಜ್ ಮಾಡಿದ್ದೇನೆ, ನೀವು ಕಿಸಬಾಯಿ ದಾಸರಲ್ಲ ಅವರು ಕಿಸಬಾಯಿ ದಾಸರಲ್ಲ,

ಗಮನ ಸೆಳೆಯುವ ಸೂಚನೆಗಳು

ದೇವನಹಳ್ಳಿಯಲ್ಲಿ ೨೫-೫-೮೮ ರಂದು ಪೋಲೀಸರು ಗಾಳಿಯಲ್ಲಿ ಗುಂಡುಹಾರಿಸಿ ಲಾಟಿ ಪ್ರಹಾರ ಮಾಡಿರುವುದರ ಬಗ್ಗೆ.

ಶ್ರೀ ಆರ್. ವೆಂಕಟರಾವಯ್ಯ.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ ದಿನಾಂಕ ೨೫-೫-೮೮ ರಂದು ಪೋಲೀಸರು ಗಾಳಿಯಲ್ಲಿ ಗುಂಡು ಹಾರಿಸಿ ಲಾಠಿ ಪ್ರಹಾರ ಮಾಡಿರುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ವೀರಣ್ಣ (ಹಣಕಾಸು ಮತ್ತು ಸಣ್ಣ ಉಳಿತಾಯ ರಾಜ್ಯ ಮಂತ್ರಿಗಳು).—ದಿನಾಂಕ ೨೨-೫-೮೮ರ ರಾತ್ರಿ ೧೧ ಗಂಟೆ ಸಮಯದಲ್ಲಿ ದೇವನಹಳ್ಳಿ ಪುರದ ಸರ್ವೆ ನಂ, ೩೦೭ರಲ್ಲಿರುವ ೧೪ ಸಣ್ಣ ಪುಟ್ಟ ಅಂಗಡಿಗಳು ಸುಟ್ಟು ಹೋಗಿರುವುದನ್ನು ಕಂಡು ಗಸ್ತಿನ ಕರ್ತವ್ಯದಲ್ಲಿದ್ದ ಕಾನ್‌ಸ್ಟೇಬಲ್‌ಗಳು ಸಬ್-ಇನ್ಸ್‌ಪೆಕ್ಟರ್‌ರವರಿಗೆ ಮಾಹಿತಿ ಕೊಟ್ಟರಂ. ತಕ್ಷಣ ಸಬ್ ಇನ್ಸ್‌ಪೆಕ್ಟರ್‌ರವರು ಸಿಬ್ಬಂದಿಯೊಡನೆ ಸ್ಥಳಕ್ಕೆ ತಲುಪಿದಾಗ ಸ್ಥಳದಲ್ಲಿ ಸುಮಾರು ೧೦೦ ರಿಂದ ೨೦೦ ಜನ ಸೇರಿದ್ದು ೧೪ ಅಂಗಡಿಗಳು ಸುಟ್ಟು ಭಸ್ಮವಾಗಿದ್ದವು. ಸ್ಥಳದಲ್ಲಿದ್ದ ಉದ್ರಿಕ್ತ ಜನರನ್ನು ಅಲ್ಲಿಂದ ಹೋಗಲು ಸಬ್ ಇನ್ಸ್‌ಪೆಕ್ಟರ್‌ರವರು ಸೂಚಿಸಿದಾಗ ಸಬ್ ಇನ್ಸ್‌ಪೆಕ್ಟರ್‌ರವರ ಸೂಚನೆಯನ್ನು ಜನರು ಉಲ್ಲಂಘಿಸಿದರು. ಉದ್ರಿಕ್ತ ಜನರನ್ನು ಸ್ಥಳದಿಂದ ಚದುರಿಸಲು ಸಬ್‌ಇನ್ಸ್‌ಪೆಕ್ಟರ್‌ರವರು ಗಾಳಿಯಲ್ಲಿ ೨ ಸುತ್ತು ಗುಂಡು ಹಾರಿಸಿದಾಗ ಜನರು ಅಲ್ಲಿಂದ ಚದುರಿದರು ಬೆಂಕಿ ಅನಾಹುತದಲ್ಲಿ ಸುಟ್ಟು ಹೋದ ಅಂಗಡಿಗಳ ಅಂದಾಜು ನಷ್ಟ ರೂ. ೨೧,೨೦೦ ಈ ಸಂಬಂಧದಲ್ಲಿ ದೇವನಹಳ್ಳಿ ಪೋಲೀಸ್ ಠಾಣೆಯಲ್ಲಿ ಒಂದು ಕೇಸನ್ನು ದಾಖಲು ಮಾಡಿ ಕೊಂಡು ರಾತ್ರಿ ಗಸ್ತನ್ನು ಪಟ್ಟಿ ಸಲಾಗಿದೆ. ಈ ಎಲ್ಲಾ ಅಂಗಡಿಗಳು ದೇವನಹಳ್ಳಿ ಸರ್ವೆ ನಂ. ೩೦೭ರಲ್ಲಿ ಕಟ್ಟಲಾಗಿರುತ್ತವೆ ಈ ಜಮೀನಿನ ಬಗ್ಗೆ ಸ್ಥಳೀಯ ಮುಸಲ್ಮಾನರು ವಕ್ಫ್ ಬೋರ್ಡ್ ಸ್ವತ್ತು ಎಂದೂ ಸ್ಥಳೀಯ ಮಂಡಿಸಿಪಲ್ ಕೌನ್ಸಿಲ್‌ನವರು ಮುನಿಸಿಪಾಲಿಟಿಯ ಜಮೀನು ಎಂದೂ ಹೇಳುತ್ತಿದ್ದಾರೆ, ಈ ಜಮೀನು ರಾಷ್ಟ್ರೀಯ ಹೆದ್ದಾರಿಯಲ್ಲಿದ್ದು ಮುಸಲ್ಮಾನರು ಮತ್ತು ಹಿಂದೂಗಳು ಇಬ್ಬರೂ ಅನಧಿಕೃತ ವಾಗಿ ಲೈಸನ್ಸ್ ಇಲ್ಲದೆ ಸಣ್ಣ ಪುಟ್ಟ ಅಂಗಡಿಗಳನ್ನು ಕಟ್ಟಿರುತ್ತಾರೆ, ಇತ್ತೀಚೆಗೆ ಶಿಡ್ಲಘಟ್ಟ ಹಾಗೂ ಮತ್ತಿತರ ಕಡೆ ನಡೆದ ಕೋಮು ಗಲಭೆಯನ್ನು ಉದ್ರೇಕಗೊಳಿಸುವ ಉದ್ದೇಶದಿಂದ ಯಾರೋ ದುರಾತ್ಮರು ಈ ಅಂಗಡಿಗಳಿಗೆ ಬೆಂಕಿ ಹಚ್ಚಿರಬಹುದೆಂದು ಶಂಕಿಸಲಾಗಿದೆ. ದಿನಾಂಕ ೨೫-೫-೮೮ರ ಬೆಳಿಗ್ಗೆ ದೇವನಹಳ್ಳಿ ಪುರದ ಮುಖಂಡರನ್ನು ಮತ್ತು ಯುವಕರನ್ನು ಕರೆಸಿ ಶಾಂತಿ ಸಭೆ ನಡೆಸಿ ಈ ವಿಷಯವನ್ನು ಬಳಸಿಕೊಂಡು ಕೋಮು ಗಲಭೆಗಳಿಗೆ ಯತ್ನ ಮಾಡುವ ಪುಂಡರಿಗೆ ಪ್ರೋತ್ಸಾಹ ನೀಡ ದಂತೆ ಪೋಲೀಸರು ಸಮಾಧಾನ ಮಾಡಿರುತ್ತಾರೆ.

ಮಾನ್ಯ ಸದಸ್ಯರು ಗಮನ ಸೆಳೆಯುವಸೂಚನೆಯಲ್ಲಿ ಪ್ರಸ್ತಾಪಿಸಿದಂತೆ ದೇವನಹಳ್ಳಿಯಲ್ಲಿ ದಿನಾಂಕ ೨೩-೫-೮೮ರಲ್ಲಿ ಮತ್ತು ೨೪-೫-೮೮ರಂದು ಯಾವ ಗಲಭೆಗಳೂ ನಡೆದಿರುವುದಿಲ್ಲ. ದಿನಾಂಕ ೨೨ ೫-೮೮ರ ರಂದು ರಾತ್ರಿ ೧೧ ಗಂಟೆಯ ಸಮಯದಲ್ಲಿ ೧೪ ಅಂಗಡಿಗಳು ಸುಟ್ಟಿರುವುದು ಆಕಸ್ಮಿಕ ಪ್ರಕರಣವೆಂದು ತಿಳಿದು ಬಂದಿರುತ್ತದೆ. ಈ ಘಟನೆಯು ಶಿಡ್ಲಘಟ್ಟದಲ್ಲಿ ನಡೆದ ಕೋಮು ಗಲಭೆಗೆ ನೇರವಾಗಿ ಸಂಬಂಧ ಹೊಂದಿರುವುದಿಲ್ಲ. ಬೆಂಕಿ ಅಪಘಾತ ನಡೆದ ಕೂಡಲೇ ಪೋಲೀಸರು ಸ್ಥಾಕ ಕ್ರಮ ತೆಗೆದುಕೊಂಡಿರುತ್ತಾರೆ. ಈಗ ಪರಿಸ್ಥಿತಿ ಶಾಂತವಾಗಿದೆ.

ಶ್ರೀ ಆರ್. ವೆಂಕಟರಾವಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಒಳ್ಳೆಯ ಹೆಸರು ಕರ್ನಾಟಕ ರಾಜಕ್ಕೆ ಇದೆ. ಕೋಮು ಗಲಭೆ ಬಹಳ ಕಟ್ಟಿದ್ದು. ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಕೋಮು ಗಲಬೆಯೆಲ್ಲವೆಂದು ಹೇಳಿದ್ದಾರೆ. ಆದರೆ ಆ ರೀತಿಯಾಗಿ ಇರುವುದು ಒಳ್ಳೆಯದೆಂದು ನಾನು ಸ್ಪಷ್ಟ ವಾಗಿ ಹೇಳುತ್ತೇನೆ. ತಾವೇ ನೋಡಿದ ಹಾಗೆ ಸುಮಾರು ೮ ದಿವಸಗಳ ಹಿಂದೆ ಪಕ್ಕಾ ಜಮೀನೆಂದು ಕೆಲವರು ಹೇಳಿದರು ಅಲ್ಲ ನಮ್ಮದು ಎಂದು ಕೆಲವರು ಸಣ್ಣ ಪುಟ್ಟ ಅಂಗಡಿಗಳನ್ನು ಕಟ್ಟಿಕೊಂಡಿದ್ದ